**ಫ್ರಾಸಾ-1ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಿದ ದಿನಾಂಕಃ 15-03-2024**
**ಮುಂದುವರೆದ ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

3. ಈಗ ನನಗೆ ತೋರಿಸಿದ ದಾಖಲೆ ಮೋಬೈಲನಲ್ಲಿದ್ದ ಸಂಭಾಷಣೆಯನ್ನು ಬರೆದ ದಾಖಲೆಯಾಗಿದ್ದು ಅದನ್ನು ನಿ.ಪಿ.19 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.19(ಎ) ಎಂದು ಗುರುತಿಸಲಾಯಿತು. ಆರ್ಟಿಕಲ್ ನಂ.2 ನ್ನು ಮು.ಮಾ.3 ಎಂದು ಗುರುತಿಸಲಾಯಿತು. ಸೀಲ್ಡ ಕವರನ್ನು ನ್ಯಾಯಾಲಯದ ಅನುಮತಿಯ ಮೇರೆಗೆ ಓಪನ ಮಾಡಲಾಗಿ ಅದರಲ್ಲಿರುವ ಸಿ.ಡಿ.ಗಳನ್ನು ಮು,ಮಾ.4 ಮತ್ತು 5 ಎಂದು ಗುರುತಿಸಲಾಯಿತು. (ಆರೋಪಿಯ ಪರ ವಕೀಲರು ಸದರಿ ಸಿ.ಡಿ.ಗಳ ನಕಲನ್ನು ಕೊಡಬೇಕು ಎಂದು ಕೇಳಿದ್ದು ಮಾನ್ಯ ಅಭಿಯೋಜಕರು ಅಭಿಯೋಜನೆಯ ಪರವಾಗಿ ಸಿ.ಡಿ.ಗಳನ್ನು ಕೊಡಲು ಬರುವುದಿಲ್ಲ ಎಂದು ನುಡಿದಿರುತ್ತಾರೆ)

4. ನಾನು, ಪಂಚರು ಅಂದರೆ ನೆರಳು ಸಾಕ್ಷಿ ಎನ್. ಬಸವರಾಜ, ಪಂಚ ಸಾಕ್ಷಿ ಪ್ರವಿಣಕುಮಾರ, ಪಿ.ಐ., ಮತ್ತು ಸಿಬ್ಬಂದಿಗಳು ಮಧ್ಯಾಹ್ನ 1-00 ಗಂಟೆಗೆ 2 ವಾಹನಗಳಲ್ಲಿ ಹೊದೆವು. ಒಂದು ಟವೇರಾ ನಂ. ಕೆಎ-44 -0142 ಮತ್ತು ಇಲಾಖಾ ಜೀಪನಲ್ಲಿ ಸುರಪೂರಕ್ಕೆ ಹೋದೆವು. ಮಧ್ಯಾಹ್ನ 2-00 ಗಂಟೆಗೆ ಹಸನಾಪೂರ ಗೇಟಬಳಿ ಹೋದೆವು. ಆರೋಪಿ ನೌಕರನಿಗೆ ಫೋನ್ ಮಾಡಲು ಪಿ.ಐ. ರವರು ನನಗೆ ಹೇಳಿದರು. ನಾನು ಫೋನ್ ಮಾಡಿದಾಗ ಆರೋಪಿ ಸಿದ್ದಾಪೂರದಲ್ಲಿದ್ದೇನೆ ಬರಲು ಇನ್ನು ಅರ್ಧ ಗಂಟೆ ಆಗುತ್ತದೆ ಎಂದು ಹೇಳಿದ. ನಾನು ಮತ್ತು ನೆರಳು ಸಾಕ್ಷಿ ಅಟೋದಲ್ಲಿ ಸುರಪೂರಕ್ಕೆ ಹೋದೆವು. ನಮಗೆ ವೈಸ ರೀಕಾರ್ಡರ ಕೊಟ್ಟು ತಿಳುವಳಿಕೆಯನ್ನು ಕೊಟ್ಟರು. ನಾವು ಬಸ್ ನಿಲ್ದಾಣದ ಬಳಿ ಹೋದೆವು. ಪಿ.ಐ. ರವರು ನೆರಳು ಸಾಕ್ಷಿ ಮತ್ತು ನನಗೆ ಸೂಚನೆಯನ್ನು ಕೊಟ್ಟರು. ನಂತರ ಆರೋಪಿ ನನಗೆ ಫೋನ್ ಮಾಡಿದರು. ಸುರಪೂರದ ಗಾಂಧಿ ಚೌಕನಲ್ಲಿರುವ ಸಂಜು ಹೊಟೇಲ ಬಳಿ ಬರುವಂತೆ ಆರೋಪಿ ನಮಗೆ ತಿಳಿಸಿದರು. ನಾನು ಈ ವಿಷಯವನ್ನು ಪಿ.ಐ. ರವರಿಗೆ ತಿಳಿಸಿದೆ. ನಾವು ಸಂಜು ಹೋಟೇಲನಲ್ಲಿ ಹೊದೆವು. ಪಿ.ಐ. ಮತ್ತು ಸಿಬ್ಬಂದಿಗಳು ಯಾರಿಗೂ ಅನುಮಾನ ಬರದಂತೆ ಬಂದಿದ್ದರು. ನಾನು ಮತ್ತು ಆರೋಪಿ ಒಂದೇ ಟೇಬಲನಲ್ಲಿ ಕುಳಿತ್ತಿದ್ದೇವು. ನೆರಳು ಸಾಕ್ಷಿ ನಮ್ಮ ಹಿಂದಿನ ಟೇಬಲನಲ್ಲಿ ಕುಳಿತ್ತಿದ್ದರು. ನಾನು ಆರೋಪಿಗೆ ನನ್ನ ಕೆಲಸ ಏನಾಯಿತು ಎಂದು ಕೇಳಿದೆ ಆಗ ಆರೋಪಿ ಕೆಲಸ ಮಾಡೋಣಾ ಎಂದು ಹೇಳಿದರು. ನಾನು ಹಣವನ್ನು ಎಲ್ಲಿ ಕೊಡಬೇಕು ಎಂದು ಕೇಳಿದೆ ಅವರು ಎಲ್ಲಿ ಕೊಟ್ಟರು ಅಷ್ಟೆ ಇದೆ ಎಂದು ಹೇಳಿದರು. ನಾನು ಆಗ 3,000/- ರೂಪಾಯಿ ರೂಪಯಿಗಳನ್ನು ಕೊಟ್ಟೆನು. ಆ ಹಣವನ್ನು ಆರೋಪಿ ಬಲಗೈಯಿಂದ ತೆಗೆದುಕೊಂಡು ಎಡಗೈಯಿಂದ ಎಣಿಸಿ ಶರ್ಟನ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡನು. ಪೊಲೀಸರು ಸೂಚನೆ ಕೊಡುವಂತೆ ಹೇಳಿದ್ದು ನಾನು ಕರವಸ್ತ್ರದಿಂದ ಮುಖ ಒರಿಸಿಕೊಂಡು ಜಬಾಗಿಲಿಗೆ ಹೊರಗಡೆ ಬಂದೆ. ನಂತರ ಪಿ.ಐ. ಮತ್ತು ಸಿಬ್ಬಂದಿಗಳು ಒಳಗೆ ಬಂದರು. ನಾನು ಆರೋಪಿಯನ್ನು

ತೋರಿಸಿ ಈತನೇ ನನ್ನಿಂದ ಲಂಚದ ಹಣ ಪಡೆದಿದ್ದು ಎಂದು ಹೇಳಿದೆ. ವಿರೇಶ ಮತ್ತು ವಿಜಯ ಕುಮಾರ ಪಿಸಿಗಳು ಆರೋಪಿಯ ಎರಡೂ ಕೈಗಳನ್ನು ಹಿಡಿದುಕೊಂಡರು. ಪಿ.ಐ. ರವರು ಬಂದು ಆರೋಪಿಗೆ ಗುರುತಿನ ಚೀಟಿ ತೋರಿಸಿ ನಾವು ಲೋಕಾಯುಕ್ತ ಪೊಲೀಸರು ಎಂದು ಹೇಳಿದರು. ನೆರಳು ಸಾಕ್ಷಿಗೆ ಪಿ.ಐ. ರವರು ವಿಚಾರಿಸಿದಾಗ ಅವರು ಈ ಎಲ್ಲ ಮಾಹಿತಿಯನ್ನು ನಾನು ಹೇಳಿದಂತೆ ಹೇಳಿದರು. ಆರೋಪಿಯ ಎರಡೂ ಕೈ ಬೆರಳುಗಳನ್ನು ತೊಳೆಸಿದರು. ಸದರಿ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು. ಸದರಿ ದಾರವಣವನ್ನು ಎರಡು ಬಾಟಲಿಗಳಲ್ಲಿ ಹಾಕಿದರು. ಅದನ್ನು ಪ್ಯಾಕ ಮಾಡಿ ಜೆ.ಬಿ. ಎಂದು ಸೀಲ್ ಮಾಡಿದರು. ನಂತರ ಆರೋಪಿ ಆ ಹಣವನ್ನು ಜೇಬಿನಲ್ಲಿ ಇಟ್ಟುಕೊಂಡ್ಡಿದ್ದ ಬಗ್ಗೆ ನಾನು ತಿಳಿಸಿದಾಗ ಪಿ.ಐ. ರವರು ಎನ್. ಬಸವರಾಜ ಅವರಿಗೆ ನೋಟು ತೆಗೆದುಕೊಡುವಂತೆ ಹೇಳಿದರು ಎನ್. ಬಸವರಾಜ ಅವರು ಸದರಿ ನೋಟುಗಳನ್ನು ತೆಗೆದರು. 500/- ರೂ ಮುಖ ಬೆಲೆಯ 6 ನೋಟುಗಳು ಇದ್ದು ಕಛೇರಿಯಲ್ಲಿ ಬರೆದುಕೊಂಡಿದ್ದ ನೊಟ ನಂಬರ ಜೊತೆ ಹೊಂದಾಣಿಕೆ ಮಾಡಿದರು. ಆ ನೊಟುಗಳನ್ನು ಒಂದು ಖಾಲಿ ಕವರನಲ್ಲಿ ಹಾಕಿ ಪ್ಯಾಕ ಮಾಡಿ ಜೆ.ಬಿ. ಎಂಬ ಅಕ್ಷರದಿಂದ ಸೀಲ್ ಮಾಡಿ ಪಿ.ಐ. ಮತ್ತು ಪಂಚರು ಸಹಿ ಮಾಡಿದ ಚೀಟಿ ಅಂಟಸಿ ತಮ್ಮ ತಾಬಾಕ್ಕೆ ತೆಗೆದುಕೊಂಡರು. ಸದರಿ ನೋಟುಗಳು ಮು.ಮಾ.1 ಆಗಿರುತ್ತದೆ. ಸಂಜು ಹೊಟೇಲನಲ್ಲಿ ಅರೋಪಿಯ ಶರ್ಟ ಬಿಚ್ಚಿಸಿ ಬೇರೆ ಶರ್ಟನ್ನು ವ್ಯವಸ್ಥೆ ಮಾಡಿ ಆ ಶರ್ಟನ ಜೇಬನ್ನು ಬಟ್ಟಲಿನಲ್ಲಿ ಅದ್ದಿದ್ದಾಗ ಆ ನೀರು ಗುಲಾಬಿ ಬಣ್ಣಕ್ಕೆ ತಿರುಗಿತು ಅದನ್ನು ಬಾಟಲನಲ್ಲಿ ಹಾಕಿ ಜೆ.ಬಿ. ಎಂಬ ಅಕ್ಷರದಿಂದ ಸೀಲಮಾಡಿ ತಮ್ಮ ತಾಬಾಕ್ಕೆ ತೆಗೆದುಕೊಂಡರು. ಅಲ್ಲಿ ಜನ ದಟ್ಟಣೆ ಇದುದ್ದರಿಂದ ಸುರಪೂರ ತಹಶೀಲ ಕಛೇರಿಗೆ ಎಲ್ಲರನ್ನು ಕರೆದುಕೊಂಡು ಹೋದರು. ಅಲ್ಲಿ ತಹಶೀಲ್ದಾರ ಕಛೇರಿಯಲ್ಲಿ ತಹಶೀಲ್ದಾರ ಮೀಟಿಂಗಗೆ ಯಾದಗಿರಿಗೆ ಹೋಗಿದ್ದರು. ಅಲ್ಲಿ ಹಿರಿಯ ಅಧಿಕಾರಿಯಾದ ನರೇಶಕುಮಾರ ಇದ್ದರು ಅವರನ್ನು ಬೇಟಿಯಾಗಿ ನರೇಶಕುಮಾರ ಅವರ ಮುಂದೆ ಧ್ವನಿ ಮುದ್ರಣ ಆಗಿದ್ದನ್ನು ಚಾಲು ಮಾಡಿದರು. ಅವರು ಆರೋಪಿಯ ಧ್ವನಿಯನ್ನು ಗುರುತಿಸಿದರು. ಮಾಳಪ್ಪ ಅವರಿಂದ ಲಿಖಿತವಾಗಿ ಸ್ವ ರಕ್ಷಣಾ ಹೇಳಿಕೆ ಬರೆಯಿಸಿಕೊಂಡರು. ಅದನ್ನು ನಿ.ಪಿ.20 ಎಂದು ಗುರುತಿಸಲಾಯಿತು. ಆರೋಪಿ ಬರೆದುಕೊಟ್ಟ ವಿಷಯ ಸುಳ್ಳಾಗಿದೆ ಎಂದು ನಾನು ಮತ್ತು ನೆರಳು ಸಾಕ್ಷಿ ಅಲ್ಲಗಳೆದವು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅಲ್ಲಿ ಪಂಚನಾಮೆಯನ್ನು ಮಾಡಿದರು. ಪಂಚನಾಮೆ ಸಂಜೆ 7-00 ಗಂಟೆಯವರೆಗೆ ಮುಗಿಯಿತು. ಸದರಿ ಪಂಚನಾಮೆಯನ್ನು ನಿ.ಪಿ.21 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.21(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೊಗಳನ್ನು ನಿ.ಪಿ.22 ರಿಂದ 27 ಎಂದು ಗುರುತಿಸಲಾಯಿತು. ಆರ್ಟಿಕಲ್ ನಂ.3 ಮತ್ತು 3(ಎ)ನ್ನು ಮು.ಮಾ.6 ಮತ್ತು 7 ಎಂದು, ಆರ್ಟಿಕಲ್ ನಂ.4 ಮತ್ತು 4(ಎ)ನ್ನು ಮು.ಮಾ.8 ಮತ್ತು 9 ಎಂದು, ಆರ್ಟಿಕಲ್ ನಂ.5 ಮತ್ತು 5(ಎ)ನ್ನು ಮು.ಮಾ.10 ಮತ್ತು 11 ಎಂದು, ಆರ್ಟಿಕಲ್ ನಂ.7 ಮತ್ತು 7(ಎ)ನ್ನು ಮು.ಮಾ.12 ಮತ್ತು 13 ಎಂದು, ಗುರುತಿಸಲಾಯಿತು.

ಸಿಲ್ಡ ಕಲವರನ್ನು ನ್ಯಾಯಾಲಯದ ಅನುಮತಿಯ ಮೇರೆಗೆ ಓಪನ ಮಾಡಲಾಯಿತು ಅದರಲ್ಲಿರುವ ಶರ್ಟನ್ನು ಮು.ಮಾ.14 ಎಂದು ಎಂದು ಗುರುತಿಸಲಾಯಿತು.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ</u>

5. ನಾನು ಹಣಕ್ಕೆ ಪೌಡರ ಲೇಪನ ಮಾಡಿದ ನೋಟುಗಳನ್ನು ಪೊಲೀಸರು ಎನ್.ಬಸವರಾಜ ಅವರ ಕೈಗೆ ಕೊಟ್ಟರು ಎಂದು ತಪ್ಪಾಗಿ ಹೇಳಿದ್ದೇನೆ ಎಂದರೆ ಸರಿ. ಹಣವನ್ನು ಪೊಲೀಸರು ಪ್ರವಿಣ ಕುಮಾರ ಅವರ ಕೈಯಲ್ಲಿ ಕೊಟ್ಟಿದ್ದು ಅವರು ನನ್ನ ಶರ್ಟ ಜೇಬಿಗೆ ಇಟ್ಟರು ಎಂದರೆ ಸರಿ. ಪ್ರವಿಣ ಕುಮಾರ ಅವರ ಕೈ ಬೆರಳುಗಳನ್ನು ಪೊಲೀಸರು ತೊಳೆದರು ಮತ್ತು ಆ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತು ಎಂದರೆ ಸರಿ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಹೆಚ್.ಎಮ್.ಪಿ. ವಕೀಲರಿಂದ</u>

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.